# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ

E-mail : kannadapostnews@gmail.com / ಕನ್ನಡ post

Price: ₹1

Vol.No.02 | Issue. 38 | Pages. 2 | Date: 06-01-2026, TUESDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 38 - ಪುಟಗಳು : 2 06-01-2026 ಮಂಗಳವಾರ Ph: 8762954248 ದರ : ₹1


# ಆರ್ಥಿಕವಾಗಿ ಹಿಂದುಳಿದವರಿಗೆ ಉಚಿತ ನೆರವು

## ಜಿಲ್ಲಾ ನ್ಯಾಯಾಧೀಶೆ ಹೇಮಾವತಿ | ಉಚಿತ ಕಾನೂನು ಸಲಹಾ ಕೇಂದ್ರ ಆರಂಭ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವಕೀಲರಿಗೆ ಹಣ ಕೊಡಲು ಸಾಧ್ಯವಾಗದ ಬಡವರಿಗೆ ನೆರವಾಗಲೆಂದು ಉಚಿತ ಕಾನೂನು ಸಲಹಾ ಕೇಂದ್ರವನ್ನು ಜಿಲ್ಲಾಧಿಕಾರಿ ಕಚೇರಿಯಲ್ಲಿ ತೆರೆದಿದ್ದು ಜಿಲ್ಲೆಯ ಜನರು ಸದುಪಯೋಗ ಪಡೆಯಬೇಕೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶೆ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಹೇಮಾವತಿ ಹೇಳಿದರು.



ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ಜಿಲ್ಲಾಡಳಿತದಿಂದ ಆರಂಭಿಸಿರುವ ಉಚಿತ ಕಾನೂನು ಸಲಹಾ ಕೇಂದ್ರ ಉದ್ಘಾಟಿಸಿ ಮಾತನಾಡಿ, ಸಮಾಜದ ಎಲ್ಲರಿಗೂ ಕಾನೂನಿನ ಅರಿವಿರಬೇಕು. ಕಟ್ಟಕಡೆಯ ವ್ಯಕ್ತಿಗೂ ಸಂವಿಧಾನ ಕಲ್ಪಿಸಿರುವ ಹಕ್ಕುಗಳು ದೊರೆಯುವಂತಾಗಬೇಕು ಎನ್ನುವುದು ಕಾನೂನು ಸೇವಾ ಪ್ರಾಧಿಕಾರದ ಉದ್ದೇಶ ಎಂದರು.

ಸಾರ್ವಜನಿಕರಿಗೆ ಕಾನೂನು ನೆರವು ಎಲ್ಲಿ ಪಡೆಯಬೇಕು ಎಂಬ ಮಾಹಿತಿ ಇರುವುದಿಲ್ಲ. ವಕೀಲರ ಸಹಾಯ ಪಡೆಯಲು ಕೆಲವರ ಬಳಿ ಹಣ ಇರುವುದಿಲ್ಲ. ಹೀಗಾಗಿ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ವಿಫಲರಾಗುತ್ತಾರೆ. ಸಾರ್ವಜನಿಕರ ಅನುಕೂಲಕ್ಕಾಗಿ ಉಚಿತ ಸಲಹಾ ಕೇಂದ್ರ ಸ್ಥಾಪಿಸಲಾಗಿದ್ದು ಸಾರ್ವಜನಿಕರು ಸಲಹಾ ಕೇಂದ್ರದ ನೆರವು ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ನ್ಯಾಯಾಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಉಚ್ಚ ನ್ಯಾಯಾಲಯದಲ್ಲಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತದೆ. ಕಾನೂನಿನ ಸಲಹೆ ಅವಶ್ಯಕತೆ ಇರುವವರು ಅದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಕಂದಾಯ, ಪೊಲೀಸ್ ಇಲಾಖೆ ಹಾಗು ಆಸ್ಪತ್ರೆ ಸೇರಿ ಎಲ್ಲಿ ಜನರಿಗೆ ಕಾನೂನಿನ ಅವಶ್ಯಕತೆ ಇರುತ್ತದೆ ಅಂತಹ ಸ್ಥಳಗಳಲ್ಲಿ ರಕ್ಷಣೆ ಪಡೆಯಬೇಕು ಎಂಬ ಯೋಜನೆಯಿಂದ ಈ ಕೇಂದ್ರ ಸ್ಥಾಪಿಸಲಾಗಿದೆ. ನೆರವಿಗೆ ನಿವೃತ್ತ ವಕೀಲರನ್ನು ನೇಮಿಸಲಾಗಿದೆ. ಯಾರು ಸಹ ಹಣ ನೀಡುವಂತಿಲ್ಲ. ಇಲ್ಲಿ ಕೆಲಸ ಮಾಡುವವರಿಗೆ ಸರ್ಕಾರವೇ ಹಣ ನೀಡುತ್ತದೆ. ಉಚಿತ ಕಾನೂನು ಸಲಹೆ ಪ್ರಯೋಜನವನ್ನು ಪಡೆದುಕೊಳ್ಳುವ ಮೂಲಕ ಕಾನೂನು ತೊಡಕುಗಳನ್ನು ಪರಿಹರಿಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಮಾತನಾಡಿ, ಕಾನೂನು ಅರಿವು ಅವಶ್ಯಕತೆ ಇರುವ ಮಹಿಳೆಯರು ಮತ್ತು ಮಕ್ಕಳು ಪ್ರಯೋಜನ ಪಡೆದುಕೊಳ್ಳಬಹುದು. ಪರಿಶಿಷ್ಟ ಜಾತಿ, ಪಂಗಡದ ವರ್ಗದವರು, ಮಾನಸಿಕವಾಗಿ ನೊಂದವರು ಉಚಿತ ಕಾನೂನು ಸೇವೆಯನ್ನು ಪಡೆದುಕೊಳ್ಳಬಹುದು ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣನವರ್, ಜಿಲ್ಲಾಧಿಕಾರಿ ಕಾನೂನು ಸಲಹೆಗಾರ ವೆಂಕಟೇಶ್ ಮತ್ತಿತರರು ಉಪಸ್ಥಿತರಿದ್ದರು.

### ಸಹಾಯವಾಣಿ ನೆರವು ಪಡೆಯಿರಿ

ಉಚಿತವಾಗಿ ಕಾನೂನು ಸೇವೆಯನ್ನು ಪಡೆಯಲು 15100 ಸಂಖ್ಯೆಗೆ ಕರೆ ಮಾಡಿ ತಮಗೆ ಅವಶ್ಯಕತೆ ಇರುವ ಕಾನೂನು ನೆರವು ಹಾಗು ಕಾನೂನು ಕೇಂದ್ರದ ವಿವರ ಪಡೆಯಬಹುದು. ನೇರವಾಗಿ ಜಿಲ್ಲಾಧಿಕಾರಿ ಕಚೇರಿಯಲ್ಲಿರುವ ಕಾನೂನು ಸಲಹಾ ಕೇಂದ್ರಕ್ಕೆ ಭೇಟಿ ನೀಡಿ ವಕೀಲರೊಂದಿಗೆ ಸಮಾಲೋಚಿಸಿ ಅಗತ್ಯ ಮಾಹಿತಿ ತಿಳಿದುಕೊಳ್ಳಬೇಕು. ಕಂದಾಯ ಮತ್ತು ವಿವಿಧ ಇಲಾಖಾ ಕೆಲಸ ಕಾರ್ಯಗಳಿಗೆ ಮತ್ತು ವಿವಿಧ ನ್ಯಾಯಾಲಯದ ಪ್ರಕರಣಗಳಿಗೆ ಸಂಬಂಧಿಸಿ ಉಚಿತವಾಗಿ ಕಾನೂನು ಸಲಹೆ ಪಡೆದು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಹೇಳಿದರು.

ಉಚಿತ ಕಾನೂನು ಸಲಹೆ ಕೇಂದ್ರದಲ್ಲಿ ತಿಮ್ಮಶೆಟ್ಟಿ ಎಂಬ ವಕೀಲರನ್ನು ನೇಮಿಸಲಾಗಿದೆ. ವಕೀಲರು ಹಣಕ್ಕೆ ಬೇಡಿಕೆಯಿಟ್ಟರೆ ನೇರವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿಗೆ ಮಾಹಿತಿ ನೀಡಬೇಕು. ಜಿಲ್ಲೆಯ ಜನರಿಗೆ ಇದರಿಂದ ಅನುಕೂಲವಾಗುತ್ತದೆಂಬ ವಿಶ್ವಾಸವಿದೆ.

**– ಹೇಮಾವತಿ, ಜಿಲ್ಲಾ ನ್ಯಾಯಾಧೀಶೆ**

## ನಟ ಯಶ್ ತಾಯಿ ಪುಷ್ಪಾ ಸಂಬಂಧಿಕರಿಂದ ಠಾಣೆಗೆ ದೂರು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಚಲನಚಿತ್ರ ನಟ ಯಶ್ ತಾಯಿ ಪುಷ್ಪಾ ಅವರ ಮನೆಯ ಕಾಂಪೌಂಡ್ ತೆರವುಗೊಳಿಸಿದ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲೇರಿದೆ.

ಪುಷ್ಪಾ ಅವರ ಜಮೀನು ನೋಡಿಕೊಂಡಿರುವ ಹಾಗೂ ಸಂಬಂಧಿ ದುರ್ಗಾ ಪ್ರಸಾದ್ ಅವರು ಜಿಪಿಎ ಹೋಲ್ಡರ್ ಎಂದು ಹೇಳಿಕೊಂಡಿರುವ ದೇವರಾಜು ವಿರುದ್ಧ ಕಾನೂನು ಹೋರಾಟ ಕೈಗೊಂಡಿದ್ದಾರೆ.

ಭಾನುವಾರ ವಿದ್ಯಾ ನಗರದಲ್ಲಿರುವ ಪುಷ್ಪಾ ಅವರ ಮನೆ ಕಾಂಪೌಂಡ್ ಧ್ವಂಸಗೊಳಿಸಿದ ಸಂಬಂಧ ಮಾತನಾಡಿದ ಅವರು, ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದರೂ ಏಕಾಏಕಿ ಕಾಂಪೌಂಡ್ ನಾಶಪಡಿಸಿ ನಷ್ಟವುಂಟು ಮಾಡಿದ್ದಾರೆ. ದೇವರಾಜು ಕಡೆಯಿಂದ ಪುಷ್ಪಾಗೆ ಜೀವ ಬೆದರಿಕೆಯಿದೆ ಎಂದು ಆರೋಪಿಸಿದರು.

ಜಾಗವನ್ನು ಪುಷ್ಪಾ ಅವರು ಗಿರೀಶ್ ಎಂಬುವವರಿಂದ ಕ್ರಯಕ್ಕೆ ತೆಗೆದುಕೊಂಡಿದ್ದಾರೆ. ದೇವರಾಜು ಹಾಗೂ ಲಕ್ಷ್ಮಮ್ಮ ಎಂಬುವರ ಜಾಗವೇ ಇಲ್ಲ. ಮನೆಯ ವಾರಸುದಾರರು ಇಲ್ಲದೇ ಇದ್ದಾಗ ಏಕಾಏಕಿ ಒಡೆದು ಹಾಕಿದ್ದು ಅದರಿಂದ ಲಕ್ಷಾಂತರ ರೂಪಾಯಿ ನಷ್ಟವುಂಟಾಗಿದೆ ಎಂದರು. ಈ ಅವ್ಯವಹಾರ ಹಿಂದೆ ಹಿಂದೆ ಸತ್ಯಮಂಗಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯಾಗಿದ್ದ ನಟರಾಜ್ ಅವರ ಕೈವಾಡವಿದೆ. ನಟರಾಜ್ ಮತ್ತು ದೇವರಾಜು ಈ ಜಾಗದ ಮೇಲೆ ಕಣ್ಣಿಟ್ಟಿದ್ದರು. ಜಾಗದ ಈ ಸ್ವತ್ತು ಮಾಡಿಕೊಟ್ಟಿದ್ದೇ ನಟರಾಜ್ ಎಂದು ಆರೋಪಿಸಿದರು.

ಕಳೆದ ಐದು ವರ್ಷದಿಂದ ಐದು ವರ್ಷದಿಂದ ಪುಷ್ಪಾ ಅವರು ಕಂದಾಯ ಕಟ್ಟಿದ್ದಾರೆ. ಗಿರೀಶ್ ಅವರಿಂದ 2018ರಲ್ಲಿ ಜಾಗ ಖರೀದಿಸಿದ್ದು ಕ್ರಯ ಆಗಿದೆ. ಪುಷ್ಪಾ ಅವರ ಹಾಸನದ ಜಮೀನುಗಳನ್ನ ನಾನೇ ನೋಡಿಕೊಳ್ಳುತ್ತೇನೆ. ವಿದ್ಯಾನಗರ ಮನೆಯಲ್ಲಿ ನಾನೇ ವಾಸವಿರುತ್ತೇನೆ. ಭಾನುವಾರ ಜಮೀನಿಗೆ ಹೋದಾಗ ಏಕಾಏಕಿ ಒಡೆದು ಹಾಕಿದ್ದಾರೆಂದು ಆಕ್ರೋಶ ವ್ಯಕ್ತಪಡಿಸಿದರು.

## ಕನ್ನಡ ಸಾಹಿತ್ಯಕ್ಕೆ ಕುವೆಂಪು ಕೊಡುಗೆ ಅಪಾರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕನ್ನಡ ಸಾಹಿತ್ಯ ಮತ್ತು ಭಾಷೆಗೆ ರಾಷ್ಟ್ರಕವಿ ಕುವೆಂಪು ಅವರ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅಭಿಪ್ರಾಯಪಟ್ಟರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ವಿಶ್ವ ಮಾನವ ದಿನಾಚರಣೆ ಉದ್ಘಾಟಿಸಿ ಮಾತನಾಡಿ, ಕುವೆಂಪು ಅವರ ವಿಶ್ವಮಾನವ ಸಂದೇಶ ಸಾರಿದ್ದಾರೆ. ಜಾತಿ ಭೇದ, ಲಿಂಗ ಭೇದವಿಲ್ಲ ಮೇಲು-ಕೀಳು ಎಂಬ ಭಾವನೆಗಳಿಲ್ಲ. ಮನುಷ್ಯರೆಲ್ಲರೂ ಒಂದೇ, ನಾವು ಭಾರತೀಯರು ಬೇರೊಂದು ದೇಶದ ಪ್ರಜೆ ಎಂಬ ಅಡೆ ತಡೆ ಇಲ್ಲ. ಎಲ್ಲರೂ ವಿಶ್ವಮಾನವರು ಎಂದು ಕುವೆಂಪು ತಮ್ಮ ಸಂದೇಶದಲ್ಲಿ ಹೇಳಿದ್ದಾರೆ. ಅವರ ಮೊದಲ ಪ್ರೀತಿ ಮೊದಲ ದೈವ ಕನ್ನಡವೇ ಆಗಿತ್ತು. ಅವರಿಗೆ ಕನ್ನಡವೇ ಉಸಿರಾಗಿತ್ತು ಎಂಬುದನ್ನು ನಾವು ಅವರ ಬರವಣಿಗೆ ಮೂಲಕ ತಿಳಿದುಕೊಳ್ಳಬಹುದು. ಕುವೆಂಪು ಅವರು ಬರೆದಿರುವ ಪ್ರಮುಖ ಕಾದಂಬರಿಗಳಲ್ಲಿ ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು ಪ್ರಮುಖ ಕಾದಂಬರಿಗಳಾಗಿದ್ದು ನಾವೆಲ್ಲರೂ ಕುವೆಂಪು ಅವರ ಬರವಣಿಗೆಯಲ್ಲಿ ಕಾನೂರು ಹೆಗ್ಗಡತಿ ಮಹಿಳೆಯ ಪರವಾಗಿ ವಿವರಿಸಿರುವುದನ್ನು ಕಾಣುತ್ತೇವೆ ಎಂದ ಅವರು ಕುವೆಂಪು ನಮ್ಮ ಕನ್ನಡ ನಾಡಿನ ಆಸ್ತಿ ಮಾತ್ರವಲ್ಲ ದೇಶದ ಆಸ್ತಿ ಮಾತ್ರವಲ್ಲ ಇಡೀ ಜಗತ್ತಿನ ಆಸ್ತಿ. ಪ್ರಾಪಂಚಿಕ ಜ್ಞಾನ ತಿಳಿಯಬೇಕೆಂದರೆ ಕನ್ನಡ ಸಾಹಿತ್ಯ ತುಂಬಾ ಮುಖ್ಯ. ವಿಶ್ವಮಾನವರ ಸಂದೇಶವನ್ನು ಪುಸ್ತಕದಲ್ಲಿ ಮಾತ್ರವಲ್ಲ ಅವರ ಜೀವನದಲ್ಲೂ ಕೂಡ ಅಳವಡಿಸಿಕೊಂಡಿದ್ದರು ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಎಲ್.ಮಲ್ಲೇಶ್‌ಗೌಡ ಮಾತನಾಡಿ, ಜಗತ್ತಿನಲ್ಲಿ ಅತಿ ದೊಡ್ಡ ಅಧ್ಯಯನ ಶೀಲರು ಕುವೆಂಪು. 9ನೇ ತರಗತಿ ಓದಿ ಮುಗಿಯುವುದರ ಜೊತೆಗೆ ಗ್ರಂಥಾಲಯದ ಅಷ್ಟು ಇಂಗ್ಲಿಷ್ ಪುಸ್ತಕಗಳನ್ನು ಓದಿದ್ದರೆಂದರು.

ಕುವೆಂಪು ಅವರು ತನ್ನ ಹುಟ್ಟೂರಿನಲ್ಲಿ ಪರಿಸರವನ್ನು ನೋಡಿದ ರೀತಿ ಮತ್ತು ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಓದಿದ ರೀತಿ ಅವರನ್ನು ಅಷ್ಟು ಎತ್ತರಕ್ಕೆ ತಲುಪಿಸಿತು. ತಮ್ಮ 35ನೇ ವಯಸ್ಸಿಗೆ ಅವರು ಬಹುತೇಕ ಕೃತಿಗಳನ್ನು ಬರೆದು ಮುಗಿಸಿದ್ದರು. 20ನೇ ವಯಸ್ಸಿಗೆ ನಾಡಗೀತೆಯನ್ನು ರಚಿಸಿದ್ದಾರೆ. ನಾಡಗೀತೆಯಿಂದ ಒಂದು ಶಬ್ದವನ್ನು ತೆಗೆಯುವ ಶಕ್ತಿ ಯಾರಲ್ಲಿಯೂ ಇಲ್ಲ ಮತ್ತು ಗೀತೆಯಲ್ಲಿ ಶಬ್ದದ ಕೊರತೆ ಇದೆ ಎಂದು ಶಬ್ದ ಸೇರಿಸುವ ಶಕ್ತಿ ಕೂಡ ಯಾರಿಗೂ ಇಲ್ಲ. ಇದು ಕುವೆಂಪು ಅವರ ಜ್ಞಾನದ ಸಂಕೇತವಾಗಿದೆ ಎಂದು ತಿಳಿಸಿದರು.

ಅವರು ಬರೆದ ಜೀವನ ಚರಿತ್ರೆ ಮತ್ತು ಆತ್ಮ ಕಥೆಗಳು ಜಗತ್ತಿಗೆ ಮಾದರಿ. ಜಗತ್ತಿನ ಎಲ್ಲಾ ಸಾಹಿತ್ಯದಲ್ಲಿ ಪ್ರಕಾರಗಳಲ್ಲಿಯೂ ಎತ್ತರದ ಸ್ಥಾನವನ್ನು ಪಡೆದಿರುವವರು ರಾಷ್ಟ್ರಕವಿ ಕುವೆಂಪು. ಕುವೆಂಪು ಅವರು ಹೇಳಿರುವ ವಿಶ್ವಮಾನವ ಗೀತೆಯನ್ನು ಜಗತ್ತು ಅರ್ಥ ಮಾಡಿಕೊಳ್ಳಬೇಕೆಂದರು.

ಮೈಸೂರು ಕುವೆಂಪು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಬೆಟ್ಟೇಗೌಡ ಉಪನ್ಯಾಸ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ.ತಾರಾನಾಥ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಜಿಲ್ಲಾ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಹಾಗೂ ಮತ್ತಿತರರು ಹಾಜರಿದ್ದರು.

## ವಸತಿ ಶಾಲೆಗಳು ವಿದ್ಯೆ ಜೊತೆಗೆ ಸಂಸ್ಕಾರ ಕಲಿಸುತ್ತವೆ: ಸಿಮೆಂಟ್ ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ವಸತಿ ಶಾಲೆಗಳು ವಿದ್ಯಾರ್ಥಿಗಳಿಗೆ ಉತ್ತಮ ಸಂಸ್ಕಾರವನ್ನು ಕಲಿಸುತ್ತಿವೆ. ಅದರಿಂದ ಅವರ ಭವಿಷ್ಯ ಉತ್ತಮವಾಗಿರುತ್ತದೆ ಎಂದು ಶಾಸಕ ಸಿಮೆಂಟ್ ಮಂಜು ಅಭಿಪ್ರಾಯಪಟ್ಟರು. ತಾಲ್ಲೂಕಿನ ಬ್ಯಾಕರವಳ್ಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಇತ್ತೀಚಿನ ದಿನದಲ್ಲಿ ವೃದ್ಧಾಶ್ರಮಗಳು ಹೆಚ್ಚಾಗುತ್ತಿವೆ. ಇದಕ್ಕೆ ಕಾರಣ ಜನರಲ್ಲಿ ವಿದ್ಯೆಯ ಜೊತೆಗೆ ಸಂಸ್ಕಾರ ಇಲ್ಲದೇ ಇರುವುದು. ವಿದ್ಯಾರ್ಥಿ ದೆಸೆಯಲ್ಲಿ ವಿದ್ಯೆಯ ಜೊತೆಗೆ ಸಂಸ್ಕಾರವನ್ನು ಕಲಿಯಬೇಕು. ಇಂತಹ ವಸತಿ ಶಾಲೆಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ಸಂಸ್ಕಾರವನ್ನು ಕಲಿಸುತ್ತಾ ಬಂದಿವೆ. ವಿದ್ಯಾರ್ಥಿಗಳು ತಂದೆ ತಾಯಿ ಕನಸನ್ನು ನನಸು ಮಾಡುವ ಗುರಿ ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಬೇಕು. ನಂತರ ವಿದ್ಯೆಯನ್ನು ಕೊಟ್ಟ ಗುರುವನ್ನು ಸದಾ ಕಾಲ ನೆನೆದು ಜೀವನ ನಡೆಸಬೇಕು ಎಂದರು.




ದೇಶದ ಆರ್ಥಿಕತೆಗೆ ಪೆಟ್ಟು ನೀಡಲು ಕಾಣದ ಕೈಗಳು ಯುವಕರನ್ನು ಮಾದಕ ವ್ಯಸನಿ ಬಲೆಗೆ ಬೀಳಿಸುತ್ತಿದ್ದಾರೆ. ಇದರಿಂದ ಯುವಕರು ಜಾಗೃತರಾಗಿರಬೇಕು. ಸತತವಾಗಿ 6 ವರ್ಷಗಳಿಂದ ಶೇಕಡ 100ರಷ್ಟು ಫಲಿತಾಂಶವನ್ನು ಕೊಡುತ್ತಿರುವ ಈ ಬ್ಯಾಕರವಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಬಗ್ಗೆ ಹೆಮ್ಮೆ ಇದೆ. ಮುಂದಿನ ದಿನದಲ್ಲಿ 2 ಕೋಟಿ ಅನುದಾನದಲ್ಲಿ ಈ ಶಾಲೆಯ ಅಭಿವೃದ್ಧಿಗೆ ಗುದ್ದಲಿ ಪೂಜೆ ಮಾಡಲಾಗುವುದು ಎಂದರು.

ಎನ್ ಡಿ ಆರ್ ಕೆ ಕಾಲೇಜಿನ ಪ್ರಾಂಶುಪಾಲ ಡಾ. ಮೋಹನ್ ಕುಮಾರ್ ಮಾತನಾಡಿ, ಈ ಶಾಲೆಯಲ್ಲಿ ವಿದ್ಯಾರ್ಥಿಗಳು ಎಲ್ಲಾ ರಂಗದಲ್ಲೂ ತಮ್ಮ ಪ್ರತಿಭೆಯನ್ನು ಹೊರಹಾಕಲು ಶಿಕ್ಷಕ ವರ್ಗದವರು ಮುಖ್ಯ ಕಾರಣ ವಹಿಸಿದ್ದಾರೆ. ಪೋಷಕರ ಬದಲು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಶಿಕ್ಷಕರು ವಹಿಸಿಕೊಂಡು ಅವರ ವಿದ್ಯಾರ್ಥಿಯ ಕನಸಿನ ಚಿಗುರಿಗೆ ನೀರೆರೆದಿದ್ದಾರೆ.ತಂದೆ ತಾಯಿಗಳು ತಮ್ಮ ಮಕ್ಕಳಿಗೆ ತಮ್ಮ ಹಾಗೂ ತಮ್ಮ ಹಿಂದಿನ ತಲೆಮಾರಿನವರ ಕಷ್ಟದ ಜೀವನವನ್ನು ತಿಳಿಸಿ ಹೇಳುವ ಮೂಲಕ ಜೀವನದ ಮೌಲ್ಯವನ್ನು ಮಕ್ಕಳಿಗೆ ಕಲಿಸಬೇಕು. ಸ್ವಾ ಅನುಭವಗಳು ಮಕ್ಕಳಲ್ಲಿ ದೀರ್ಘ ಕಾಲ ಉಳಿಯುತ್ತದೆ.ಕಷ್ಟದಲ್ಲಿ ಕಲಿತ ವಿದ್ಯೆ ಜೀವನದಲ್ಲಿ ಒಳ್ಳೆ ದಾರಿ ಮಾಡಿಕೊಡುತ್ತದೆ.ಜನಪ್ರತಿನಿಧಿಗಳು ಸಾರ್ವಜನಿಕ ಸಭೆಗಳಿಗಿಂತ ಇತರಹದ ಶೈಕ್ಷಣಿಕ ಸಭೆಯಲ್ಲಿ ಪಾಲ್ಗೊಂಡರೆ ವಿದ್ಯಾರ್ಥಿಗಳಿಗೆ ಪ್ರೇರಣೆ ಸಿಗುತ್ತದೆ ಎಂದರು.

ಪ್ರಾಂಶುಪಾಲ ಶತೇಂದ್ರ ಕುಮಾರ್, ಬ್ಯಾಕರವಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಭಾಗ್ಯಮ್ಮ, ಸದಸ್ಯರಾದ ಚನ್ನಯ್ಯ, ಪ್ರಾಂಶುಪಾಲೆ ಡಾ. ಮಾಲಿನಿ, ಪುರಸಭೆ ಮಾಜಿ ಸದಸ್ಯ ಪ್ರದೀಪ್, ಕುಮಾರ್ ಇತರರಿದ್ದರು.




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ತಾಲ್ಲೂಕಿನ ಬಾಳ್ಳುಪೇಟೆಯ ನಿರಂತರ ಯೋಗ ಕೇಂದ್ರದ ಸೇವೆ ಗುರುತಿಸಿ ಕರ್ನಾಟಕ ಮಾನವ ಹಕ್ಕುಗಳ ಸಂರಕ್ಷಣಾ ಸಂಸ್ಥೆ ಡಾ. ನಾಗಲಕ್ಷ್ಮಿ ಚೌಧರಿ ಜನ ಸೇವಾ ಸಂಸ್ಥೆಯು 2026ನೇ ಸಾಲಿನ ಸಾಲು ಮರದ ತಿಮ್ಮಕ್ಕ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿರಂತರ ಯೋಗ ಕೇಂದ್ರ ಅಧ್ಯಕ್ಷ ಎ.ಎನ್.ದಾಮೋದರ್, ಸದಸ್ಯರಾದ ತೇಜಸ್, ರವೀಂದ್ರ ಕುಮಾರ್, ರಿತೇಶ್ ಕುಮಾರ್, ವಸಂತ್ ಕುಮಾರ್, ಗುರುದೇವ್, ಕುಮಾರ್ ಇತರರಿದ್ದರು.

## ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ಗಮಕ ಹಬ್ಬ-ಕವಿ ನಮನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕರ್ನಾಟಕ ಗಮಕ ಕಲಾ ಪರಿಷತ್, ಜಿಲ್ಲಾ ಘಟಕದಿಂದ ಜ. 6 ರಿಂದ 12ರ ವರೆಗೆ 23ನೇ ವರ್ಷದ ಗಮಕ ಹಬ್ಬ-ಕವಿನಮನ ಹಮ್ಮಿಕೊಳ್ಳಲಾಗಿದೆಯೆಂದು ಗಮಕ ಕಲಾ ಪರಿಷತ್ ಜಿಲ್ಲಾಧ್ಯಕ್ಷ ಗಣೇಶ ಉಡುಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ನಗರದ ಶ್ರೀ ಸೀತಾರಾಮಾಂಜನೇಯ ದೇವಾಲಯದ ಸಪ್ತಪದಿ ಸೌದಾಮಿನೀ ಸಭಾಂಗಣದಲ್ಲಿ ಪ್ರತಿದಿನ ಸಂಜೆ 5 ಗಂಟೆಗೆ ಕಾರ್ಯಕ್ರಮ ಆರಂಭವಾಗಲಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರ ಗೃಹ ನಿರ್ಮಾಣ ಸಹಕಾರ ಸಂಘ, ಸಂಸ್ಕಾರ ಭಾರತೀ, ಸೀತಾರಾಮಾಂಜನೇಯ ಸೇವಾ ಸಮಿತಿ ಸಮಾರಂಭಕ್ಕೆ ಸಹಕಾರ ನೀಡಿದೆ. ಏಳು ಕವಿಗಳ ಕಾವ್ಯಗಳ ಗಾಯನ-ವ್ಯಾಖ್ಯಾನ ನಡೆಯಲಿದೆ. ನಾಡಿನ ವಿವಿಧ ಭಾಗಗಳಿಂದ ಖ್ಯಾತ ಗಮಕಿಗಳು ಹಾಗು ವ್ಯಾಖ್ಯಾನಕಾರರು ಆಗಮಿಸಲಿದ್ದಾರೆ ಎಂದರು.

ಜ.6ರ ಮಂಗಳವಾರ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಹಾಗು ಅಷ್ಟಾವಧಾನಿ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಹೆಚ್.ಪಿ.ತಾರಾನಾಥ್, ಉಪನ್ಯಾಸಕ ಡಾ. ಎಂ.ಎನ್.ಪಾಂಡುರಂಗ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು.




ಬೇಲೂರಿನ ಗಮಕ ವಿದುಷಿ ನವರತ್ನ ಎಸ್.ವಟಿಯವರಿಗೆ ಆಗಮಕ ಕಲಾಶ್ರೀಟ ಬಿರುದು ಪ್ರದಾನ ಮಾಡಲಾಗುವುದು. ಮುದ್ದಣ ಕವಿಯ ಅರಾಮಾಶ್ವಮೇಧಟ ಕಾವ್ಯಭಾಗವನ್ನು ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ ವ್ಯಾಖ್ಯಾನಿಸಲಿದ್ದು, ಹಾಸನದ ವಿದುಷಿ ರಾಧಾ ಕೃಷ್ಣ ಸ್ವರೂಪ್ ಗಾಯನ ಮಾಡಲಿದ್ದಾರೆ. ಜ.7 ರಂದು ಕುಮಾರವ್ಯಾಸ ಭಾರತದ ಆಯ್ದ ಭಾಗ, ಜ. 8 ರಂದು ಲಕ್ಷ್ಮೀಶ ಕವಿಯ ಜೈಮಿನಿ ಭಾರತ, 9 ರಂದು ರಾಘವಾಂಕ ಮಹಾಕವಿಯ ಹರಿಶ್ಚಂದ್ರ ಕಾವ್ಯ, 10 ರಂದು ಷಡಕ್ಷರದೇವನ ಶಬರಶಂಕರ ವಿಲಾಸ, 11 ರಂದು ಆಸೂರಿ ರಾಮಸ್ವಾಮಿ ಅಯ್ಯಂಗಾರ್ ವಿರಚಿತ ಗೋಕರ್ಣಮಹಿಮಾದರ್ಶ ಕಾವ್ಯಗಳ ಗಾಯನ-ವ್ಯಾಖ್ಯಾನ ನಡೆಯಲಿವೆ ಎಂದು ವಿವರಿಸಿದರು.

ಜ.12ರಂದು ಲೇಖಕಿ ಶಾಂತಾ ಗೋಪಾಲ್ ಅಧ್ಯಕ್ಷತೆಯಲ್ಲಿ ಸಮಾರೋಪ ಸಮಾರಂಭ ನಡೆಯಲಿದ್ದು, ನಗರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎಂ.ಸುರೇಶ್ ಭಾಗವಹಿಸಲಿದ್ದಾರೆ. ಅದೇ ದಿನ ತೊಗಲು ಗೊಂಬೆ ಕಲಾವಿದ ಗುಂಡೂರಾಜ್, ಸಂಗೀತ-ನೃತ್ಯ ಕಲಾವಿದೆ ರಮ್ಯಾ ಸೂರಜ್, ಗಮಕ ವಿದುಷಿ ಲಕ್ಷ್ಮೀ ಜಯಪ್ರಕಾಶ್ ಹಾಗು ಡಾ. ಎನ್. ರಮೇಶ್ ಅವರನ್ನು ಸನ್ಮಾನಿಸಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ರುಕ್ಮಿಣಿ ನಾಗೇಂದ್ರ, ಅನುಸೂಯಾ, ಕುಮಾರಸ್ವಾಮಿ ಇತರರಿದ್ದರು.

## ವರ್ಲ್ಡ್ ಬುಕ್ ಆಫ್ ರೆಕಾರ್ಡ್‌ಗೆ ಹಾಸನ ವಿದ್ಯಾರ್ಥಿಗಳ ಟೆಲಿಸ್ಕೋಪ್



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ದೊಡ್ಡಬಳ್ಳಾಪುರದ ಬೆಸೆಂಟ್ ಪಾರ್ಕ್‌ನಲ್ಲಿ ಇತ್ತೀಚೆಗೆ ನಡೆದ ಟೆಲಿಸ್ಕೋಪ್ ತಯಾರಿಕಾ ತರಬೇತಿ ಕಾರ್ಯಾಗಾರದಲ್ಲಿ ಜಿಲ್ಲೆಯ ಭಾರತ ಸೇವಾದಳ ವಿದ್ಯಾರ್ಥಿಗಳು ತಯಾರಿಸಿದ ಟೆಲಿಸ್ಕೋಪ್ Indian Book of Record, Essain Book of Record, World Book of Record ಗೆ ದಾಖಲಾಗಿದೆ.

ಯಾದಗಿರಿಯಲ್ಲಿ ನಡೆದ ಐದನೇ ವೈಜ್ಞಾನಿಕ ಸಮ್ಮೇಳನದಲ್ಲಿ ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್‌ಕುಮಾರ್ ಅವರು ಭಾರತ ಸೇವಾದಳ ಜಿಲ್ಲಾ ಸಂಘಟಕಿ ವಿ.ಎಸ್.ರಾಣಿ ಅವರಿಗೆ ಪ್ರಮಾಣ ಪತ್ರ ವಿತರಿಸಿದರು. ತರಬೇತಿ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಯಾಗಿ ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಸಂಸ್ಥಾಪಕ ಡಾ. ಹುಲಿಕಲ್ ನಟರಾಜ್ ಪಾಲ್ಗೊಂಡಿದ್ದರು. ವೈಜ್ಞಾನಿಕ ಸಮ್ಮೇಳನದ ಮಹಾ ಅಧಿವೇಶನದಲ್ಲಿ ಶ್ರೀ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮೀಜಿ, ಸಿದ್ದರಾಮಯ್ಯ ಸ್ವಾಮೀಜಿ, ಭಾರತ ಸೇವಾದಳದ ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ರವಿಕುಮಾರ್ ಗೌಡ, ರಾಜ್ಯ ವೈಜ್ಞಾನಿಕ ಸಂಶೋಧನಾ ಪರಿಷತ್ತಿನ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ನಿಚಿತಾ ಕುಮಾರಿ, ಕೆ.ವಿ.ಯೋಗೀಶ ಮತ್ತಿತರರಿದ್ದರು.

## ಸರ್ಕಾರಿ ಶಾಲೆ ಉಳಿವಿಗಾಗಿ ಬೀದಿಗಿಳಿದ ವಿದ್ಯಾರ್ಥಿಗಳು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮ್ಯಾಗ್ನೆಟ್ ಶಾಲೆ ಹೆಸರಿನಲ್ಲಿ ತಾಲ್ಲೂಕಿನ ಕೆಲವತ್ತಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಮುಚ್ಚುತ್ತಿರುವ ಸರ್ಕಾರ ತನ್ನ ಅವೈಜ್ಞಾನಿಕ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಆಗ್ರಹಿಸಿ ಶಾಲಾ ವಿದ್ಯಾರ್ಥಿಗಳು ಎಐಡಿಎಸ್‌ಓ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು. ಸರ್ಕಾರಿ ಶಾಲೆ ಉಳಿಸಬೇಕೆಂದು ಮಕ್ಕಳು ಗ್ರಾಮದಲ್ಲಿ ಮೆರವಣಿಗೆ ನಡೆದಿದರು.

ಎಐಡಿಎಸ್‌ಓ ರಾಜ್ಯ ಖಜಾಂಚಿ ಸುಭಾಷ್ ಮಾತನಾಡಿ, ಮ್ಯಾಗ್ನೆಟ್ ಹೆಸರಿನಲ್ಲಿ ಗ್ರಾಮ ಪಂಚಾಯಿತಿಗೊಂದು ಸರ್ಕಾರಿ ಶಾಲೆ ಮಾಡುತ್ತೇವೆಂದು ರಾಜ್ಯದ 40 ಸಾವಿರಕ್ಕಿಂತ ಹೆಚ್ಚು ಸರ್ಕಾರಿ ಶಾಲೆಗಳನ್ನು ವಿಲೀನದ ಹೆಸರಿನಲ್ಲಿ ಮುಚ್ಚಲು ಮುಂದಾಗಿದೆ. ಕೆಲವತ್ತಿ ಶಾಲೆಯಲ್ಲಿ 25 ಮಕ್ಕಳು ಓದುತ್ತಿದ್ದಾರೆ. ಈ ಶಾಲೆ ಉಳಿದರೆ ಮಾತ್ರ ಅವರಿಗೆ ಶಿಕ್ಷಣ. ಆದರೆ ಸರ್ಕಾರ ಶಾಲೆ ಮುಚ್ಚಿ ನಿಟ್ಟೂರಿನ ಶಾಲೆಗೆ ಕಳುಹಿಸುತ್ತಿರುವುದು ಖಂಡನೀಯ ಎಂದರು.

ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ರಕ್ತದಲ್ಲಿ ಕನ್ನಡವಿದೆ ಒಂದೇ ಒಂದು ಸರ್ಕಾರಿ ಶಾಲೆ ಮುಚ್ಚುವುದಿಲ್ಲವೆಂದು ಸದನದಲ್ಲಿ ಹೇಳಿದರು. ಆದರೆ ಶಾಲೆಗಳಿಗೆ ಬೀಗ ಹಾಕುವ ಪ್ರಕ್ರಿಯೆಗೆ ತಡೆ ಬಿದ್ದಿಲ್ಲ. ಕಳೆದ ಎಂಟು ವರ್ಷಗಳಲ್ಲಿ ಮೂರುವರೆ ಸಾವಿರಕ್ಕೂ ಹೆಚ್ಚು ಖಾಸಗಿ ಶಾಲೆಗಳಿಗೆ ಅನುಮತಿ ನೀಡಿದ್ದಾರೆ. ಸರ್ಕಾರಿ ಶಾಲೆಗಳ ಅಭಿವೃದ್ಧಿ ನಡೆಸದೆ ಖಾಸಗಿ ಶಾಲೆಗಳ ಪರ ಕೆಲಸ ಮಾಡಿದ್ದಾರೆ. 60,000ಕ್ಕೂ ಹೆಚ್ಚು ಶಿಕ್ಷಕರ ಹುದ್ದೆ ಖಾಲಿ ಇವೆ. 21,000ಕ್ಕೂ ಹೆಚ್ಚಿಗೆ ಕೊಠಡಿಗಳು ದುರಸ್ತಿಯಾಗಿಲ್ಲ. ಸರ್ಕಾರಿ ಶಾಲೆಗಳಿಗೆ ಸೌಕರ್ಯ ಕಲ್ಪಿಸದೆ ಖಾಸಗಿ ಸಂಸ್ಥೆಗಳಿಗೆ ಆದ್ಯತೆ ನೀಡುತ್ತಿರುವುದು ಏಕೆ ಎಂದು ಪ್ರಶ್ನಿಸಿದರು.

ಗ್ರಾಮಸ್ಥರಾದ ಸಿದ್ದೇಶ್, ಸಣ್ಣೇಗೌಡ ಮಾತನಾಡಿ, ಕೆಲವತ್ತಿ ಶಾಲೆಯನ್ನು ಮುಚ್ಚಲು ಬಿಡುವುದಿಲ್ಲ. ಗ್ರಾಮಸ್ಥರೆಲ್ಲರೂ ಒಟ್ಟಾಗಿ ಶಾಲೆಗಾಗಿ ಹೋರಾಡುತ್ತೇವೆ. ಸರ್ಕಾರಿ ಶಾಲೆ ಇದ್ದರೆ ಮಾತ್ರ ಬಡವರಿಗೆ ಶಿಕ್ಷಣ ಎಂದರು.

## ದೇವಸ್ಥಾನದಲ್ಲಿ ಚಿನ್ನಾಭರಣ ಕಳವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ದೇವಸ್ಥಾನದ ಬಾಗಿಲು ಮುರಿದು ಒಳನುಗಿರುವ ಕಳ್ಳರು ದೇವರಿಗೆ ಹಾಕಿದ್ದ ಅಂದಾಜು 1.44 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ. ತಾಲ್ಲೂಕಿನ ಚಿಕ್ಕಗಂಡಸಿಯ ಶ್ರೀ ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ಜ. 2ರ ರಾತ್ರಿ ಕಳ್ಳತನ ನಡೆದಿದೆ. ಮಾರನೇ ದಿನ ಅರ್ಚಕರು ಬಂದು ನೋಡಿದಾಗ ಬಾಗಿಲು ಮುರಿದಿರುವುದು ಗೊತ್ತಾಗಿದೆ. ದೇವಿಯ ಮೂರ್ತಿಗೆ ಹಾಕಿದ್ದ 15 ಗ್ರಾಂ ತೂಕದ ಚಿನ್ನದ ಸರ, 6 ಗ್ರಾಂ ತೂಕದ ಚಿನ್ನದ 3 ತಾಳಿ, 2 ಗ್ರಾಂ ತೂಕದ ಚಿನ್ನದ ಗುಂಡು, 5 ಗ್ರಾಂ ತೂಕದ ಒಂದು ಚಿನ್ನದ ಮೂಗು ನತ್ತು, 2 ಗ್ರಾಂ ತೂಕದ ಒಂದು ಚಿನ್ನದ ಮೂಗು ನತ್ತುಗಳನ್ನು ಒಟ್ಟು ಸುಮಾರು 30 ಗ್ರಾಂ ತೂಕದ ಚಿನ್ನಾಭರಣ ಹಾಗೂ ಹುಂಡಿಯಲ್ಲಿದ್ದ ಹಣ ಕಳುವಾಗಿದೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮನೆ ಮನೆ ಕವಿಗೋಷ್ಟಿ 2 ದಶಕಗಳ ಸಾಹಿತ್ಯ ಸೇವೆ ಶ್ಲಾಘನೀಯ

## ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು । ಪತ್ರಕರ್ತರ ಭವನದಲ್ಲಿ ಕಾರ್ಯಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಹಾಸನ: ಸಾಮಾಜಿಕ ಜಾಲತಾಣಗಳ ಪ್ರಭಾವದಿಂದ ಕವಿತೆ, ಕಾದಂಬರಿಗಳ ವಿಮರ್ಶೆಯಾಗದೆ ಬರಹಗಾರರ ಬೆಳವಣಿಗೆಗೆ ಪ್ರೋತ್ಸಾಹ ಇಲ್ಲದಂತಾಗಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಮನೆ-ಮನೆ ಕವಿಗೋಷ್ಟಿ ಎರಡು ದಶಕಗಳಿಂದ ಸಾಹಿತ್ಯ ಕೃಷಿ ಮಾಡಿಕೊಂಡು ಬಂದಿರುವುದು ಶ್ಲಾಘನೀಯವೆಂದು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಹೇಳಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಾಂಸ್ಕೃತಿಕ ಸಮಿತಿ ವತಿಯಿಂದ ಪತ್ರಕರ್ತರ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮನೆ-ಮನೆ ಕವಿಗೋಷ್ಟಿ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲರನ್ನೂ ಕವಿ, ಪತ್ರಕರ್ತ, ಸಾಹಿತಿ ಎನ್ನಲು ಸಾಧ್ಯವಿಲ್ಲ. ನಿರಂತರ ಬರವಣಿಗೆಯಿಂದ ಕಾವ್ಯ ಸೃಷ್ಟಿಯಾಗುತ್ತದೆ. ಪತ್ರಕರ್ತರಲ್ಲಿ ಕವಿ ಹೃದಯ ಇರುತ್ತದೆ. ಅನಕೃ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ರಾಜಾರಾಮನ್, ಎಸ್. ಎಲ್.ಭೈರಪ್ಪ ಸೇರಿ ಅನೇಕರು ಕವಿ ಭಾವನೆಯಿಂದಲೇ ಸಾಹಿತ್ಯ ಕ್ಷೇತ್ರದಲ್ಲಿ ಅಪರಿಮಿತ ಸಾಧನೆ ಮಾಡಿದ್ದಾರೆ ಎಂದರು.

ಕವಿಗಳು ತಮ್ಮ ಬರವಣಿಗೆ ಮೂಲಕ ಇವತ್ತಿನ ತಾಕಲಾಟಗಳಿಗೆ ಮುಖಾಮುಖಿಯಾಗಬೇಕು. ಎಷ್ಟು ದೊಡ್ಡದಾಗಿ ಬರೆಯುತ್ತೇವೆಂಬುದರ ಬದಲು ಎಷ್ಟು ಪರಿಣಾಮಕಾರಿಯಾಗಿ ಬರೆಯುತ್ತೇವೆ ಎನ್ನುವುದು ಮುಖ್ಯವಾಗುತ್ತದೆ. ಇತ್ತೀಚೆಗೆ ವಾಟ್ಸಾಪ್ ವಿಶ್ವವಿದ್ಯಾಲಯ ಪ್ರವೃತ್ತಿ ಹೆಚ್ಚಿದೆ. ಯಾವುದೇ ಒಂದು ಕವನವನ್ನು ವಿಮರ್ಶಿಸಿ ಮಾರ್ಗದರ್ಶನ ಮಾಡುವ ಕಾರ್ಯಾಗಾರಗಳು ಆಗಬೇಕು. ಫೇಸ್ ಬುಕ್‌ನಲ್ಲಿ ಲೈಕ್ ಗಳಿಸುವುದಕ್ಕಷ್ಟೇ ಕವಿತೆಗಳು ಸೀಮಿತವಾಗಬಾರದು. ಪ್ರತಿಭಾನ್ವಿತರಿಗೆ ವೇದಿಕೆ ಮಾಡಿಕೊಡುವ ಕೆಲಸ ಕವಿಗೋಷ್ಠಿಯಿಂದ ಆಗಬೇಕೆಂದು ಸಲಹೆ ನೀಡಿದರು.

ನಾವು ಸಾಮಾಜಿಕ ಬದ್ಧತೆ ಹಿನ್ನಲೆಯಲ್ಲಿ ಬರೆಯಬೇಕು. ದೇಶ ಕಟ್ಟುವಲ್ಲಿ ಕವಿಗಳು, ಪತ್ರಕರ್ತರು ಸಾಕಷ್ಟು ಕೊಡುಗೆ ನೀಡಿದ್ದಾರೆ. ಆ ಕಾಲಘಟ್ಟದಿಂದ ನಡೆದುಕೊಂಡು ಬಂದಿರುವ ಪರಂಪರೆಯನ್ನು ಉಳಿಸಿಕೊಳ್ಳುವ ಸವಾಲು ನಮ್ಮೆಲ್ಲರ ಮುಂದಿದೆ ಎಂದರು.

ಹಾಸನದಲ್ಲಿ ಮನೆ ಮನೆ ಕವಿಗೋಷ್ಟಿ ಆರಂಭವಾಗುವುದಕ್ಕೆ ಸುದೀರ್ಘ ಇತಿಹಾಸವಿದೆ. ಆಕಾಶವಾಣಿಯಲ್ಲಿ ನಿರ್ದೇಶಕರಾಗಿದ್ದ ವಸಂತಕುಮಾರ್, ಸಂಯುಕ್ತ ಕರ್ನಾಟಕ ವರದಿಗಾರ ದಿ. ಜೈಕುಮಾರ್ ಅವರ ಚಿಂತನೆಯಿಂದ ಶುರುವಾದ ಕವಿಗೋಷ್ಟಿ 20 ವರ್ಷ ಪೂರೈಸಿರುವುದು ಹೆಮ್ಮೆಯ ವಿಚಾರ. ಚಿಕ್ಕದಾಗಿ ಶುರುವಾದ ಕವಿಗೋಷ್ಟಿ ಇಂದು ದೊಡ್ಡ ಮಟ್ಟದಲ್ಲಿ ಬೆಳೆದಿದೆ. ಹಲವಾರು ಜನರಿಗೆ ವೇದಿಕೆ ಕಲ್ಪಿಸಿಕೊಟ್ಟ ಮನೆ ಮನೆ ಕವಿಗೋಷ್ಟಿ ಬೆಳೆದು ಬಂದ ದಾರಿಯನ್ನು ಪುಸ್ತಕ ರೂಪದಲ್ಲಿ ದಾಖಲಿಸಬೇಕು ಎಂದು ಆಯೋಜಕರಿಗೆ ಸಲಹೆ ನೀಡಿದರು.

ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಮಾತನಾಡಿ, ಹಳೆ ಬೇರು-ಹೊಸ ಚಿಗುರುಗಳನ್ನು ಒಟ್ಟಿಗೆ ಕರೆದೊಯ್ಯುವ ಕೇಂದ್ರ ಮನೆ ಮನೆ ಕವಿಗೋಷ್ಟಿಯಾಗಿದೆ. ಹೊಸ ಲೇಖಕರಿಗೆ ಪ್ರೇರಕವಾಗಿ ತಮ್ಮ ಪ್ರತಿಭೆಯನ್ನು ಪ್ರಚುರಪಡಿಸಲು ಎಲ್ಲರೂ ಸಹಕರಿಸಬೇಕು. ಆ ಕೆಲಸವನ್ನು ಆಯೋಜಕರು ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆಂದು ಮೆಚ್ಚುಗೆ ಸೂಚಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವೂ ಕವಿ ಮನಸ್ಸಿನವರೇ ಆಗಿದ್ದು ನಿಮ್ಮೊಂದಿಗೆ ಬೆರೆಯಬೇಕೆಂಬ ಉದ್ದೇಶದಿಂದ ನಮ್ಮ ಸಂಘದಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇವೆಂದರು. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಿದ್ದರು. ಮನೆ ಮನೆ ಕವಿಗೋಷ್ಟಿ ಸಂಚಾಲಕಿ ಸುಕನ್ಯ ಮುಕುಂಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಮಲಮ್ಮ ಅವರ ಕಾಲವೆಂಬ ಕನ್ನಡಿಯಲ್ಲಿ ಕೃತಿಯನ್ನು ಲೇಖಕ ಉಮೇಶ್ ಹೊಸಳ್ಳಿ ಪರಿಚಯ ಮಾಡಿಕೊಟ್ಟರು. ವೇದಿಕೆ ಕಾಯಕ್ರಮದ ಬಳಿಕ ಕವಿತೆ ವಾಚನ ನೆರವೇರಿತು.

ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಉದಯರವಿ, ಪತ್ರಕರ್ತರಾದ ಲೀಲಾವತಿ, ಚಲಂ, ಬಿ.ಆರ್.ಬೊಮ್ಮೇಗೌಡ ಹಾಗೂ ಮನೆ ಮನೆ ಕವಿಗೋಷ್ಟಿ ಸದಸ್ಯರು ಹಾಜರಿದ್ದರು.

# ಹಗರೆಯಲ್ಲಿ 2033ನೇ ಮದ್ಯ ವರ್ಜನ ಶಿಬಿರ ಆರಂಭ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಗರೆ: ಕುಟುಂಬದ ಒಬ್ಬ ವ್ಯಕ್ತಿ ಮದ್ಯ ವ್ಯಸನಿಯಾದರೆ ಇಡೀ ಸಂಸಾರದ ಗೌರವ ಬೀದಿಗೆ ಬರುತ್ತದೆಂದು ಹಗರೆ ಕೃಷಿ ಪತ್ತಿನ ಸಹಕಾರ ಸಂಘದ ಮಾಜಿ ಅಧ್ಯಕ್ಷ ಶಿವರಾಜು ಹೇಳಿದರು. ಬೇಲೂರು ತಾಲ್ಲೂಕು ಮಾದಿಹಳ್ಳಿ ಹೋಬಳಿ ಹಗರೆಯ ಸತ್ಯನಾರಾಯಣಸ್ವಾಮಿ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಆಯೋಜಿಸಿರುವ 2033ನೇ ಮದ್ಯ ವರ್ಜನ ಶಿಬಿರ ಉದ್ಘಾಟಿಸಿ ಮಾತನಾಡಿ, ಸಾರಾಯಿ ಸಹವಾಸ ಹೆಂಡತಿ ಮಕ್ಕಳ ವನವಾಸ ಎಂಬ ಮಾತು ಸತ್ಯ. ಅಂತಹ ಕುಟುಂಬ ಮಾನಸಿಕವಾಗಿ ತೀವ್ರ ತೊಂದರೆ ಅನುಭವಿಸಬೇಕಾಗುತ್ತದೆ ಎಂದರು.

ಸ್ವಯಂ ಪ್ರೇರಿತವಾಗಿ ದುಶ್ಚಟಗಳನ್ನು ಬಿಡಬೇಕು. ಈ ಶಿಬಿರದಲ್ಲಿ ಔಷಧಿ ಚುಚ್ಚುಮದ್ದು ನೀಡದೆ ಭಜನೆ, ಯೋಗ, ಧ್ಯಾನ ಮಾಡಿಸುವುದು, ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮೂಲಕ ಮನ ಪರಿವರ್ತನೆ ಮಾಡುತ್ತಾರೆ. ಶಿಬಿರಾರ್ಥಿಗಳು ಪ್ರಯೋಜನ ಪಡೆಯಬೇಕು. ಸೋಮಾರಿಗಳಿಗೆ ದುಶ್ಚಟಗಳು ಬೇಗ ಅಂಟಿಕೊಳ್ಳುತ್ತವೆ. ಆದ್ದರಿಂದ ಮನುಷ್ಯ ಕೆಲಸಗಳಲ್ಲಿ ತೊಡಗಬೇಕೆಂದರು. ಬಿಜೆಪಿ ತಾಲ್ಲೂಕು ಉಪಾಧ್ಯಕ್ಷ ಡಿಶಾಂತ ಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯ ಕನಸು ನನಸಾಗಬೇಕೆಂದರೆ ಸಾರಾಯಿ ನಿಷೇಧವಾಗಬೇಕು. ಆದರೆ ಇಂದು ಹಳ್ಳಿಗಳಲ್ಲೂ ಮದ್ಯ ಮಾರಾಟ ಜೋರಾಗಿದೆ. ಸಮಾಜವನ್ನು ಸರಿ ದಾರಿಗೆ ತರಲು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಘ ಮಾಡುತ್ತಿರುವ ಕೆಲಸ ಶ್ಲಾಘನೀಯ ಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಮಂಜುಳ, ಶಿಬಿರಾಧಿಕಾರಿ ರಮೇಶ್, ಮೋಹನ್, ಮಂಜೇಗೌಡ, ಕಾಂತರಾಜು, ಎಸ್. ಗೌಡ, ಡಾ. ಪ್ರಸನ್ನ ಇತರರಿದ್ದರು.

# ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲು ಸಲಹೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಗತ್ತು ವೇಗವಾಗಿ ಬೆಳೆಯುತ್ತಿದ್ದು ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸ್ಪರ್ಧಾತ್ಮಕ ಜಗತ್ತಿಗೆ ತಯಾರು ಮಾಡಬೇಕಿದೆ ಎಂದು ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷ ಆರ್.ಟಿ.ದ್ಯಾವೇಗೌಡ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಲೆನಾಡು ಹಿಪ್ಪೋ ಕ್ಯಾಂಪಸ್ ಶಾಲೆಯಿಂದ ಏರ್ಪಡಿಸಿದ್ದ ನವರಸ 2025-26ನೇ ಸಾಲಿನ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡುವುದು ಅಗತ್ಯವಾಗಿದೆ. 7 ವರ್ಷದಿಂದ ಹಾಸನ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯ ವ್ಯಾಪ್ತಿಯಲ್ಲಿ ಮಲೆನಾಡ ಹಿಪ್ಪೋ ಕ್ಯಾಂಪಸ್ ಶಾಲೆ ಉತ್ತಮ ಶಿಕ್ಷಣ ನೀಡುತ್ತಿದೆ. ಗುಣಮಟ್ಟ ಕಾಪಾಡಲು ನಮ್ಮ ಆಡಳಿತ ಮಂಡಳಿ ಸಹಕಾರ ಇರಲಿದೆ ಎಂದರು.

ವಿದ್ಯೆಯನ್ನು ಲಾಭಕ್ಕಾಗಿ ಮಾಡದೆ ಉತ್ತಮ ಶಿಕ್ಷಣ ನೀಡುವುದು ನಮ್ಮ ಗುರಿಯಾಗಿದೆ. ಎಲ್ ಕೆಜಿ, ಯುಕೆಜಿಯಿಂದ ಪದವಿ ವರೆಗೆ ಹಾಗು ಇಂಜಿನಿಯರಿಂಗ್, ಎಂಸಿಎ, ಎಂಬಿಎ, ಎಲ್‌ಎಲ್‌ಬಿ ಕಾಲೇಜುಗಳ ಮೂಲಕ ಶಿಕ್ಷಣ ನೀಡಲಾಗುತ್ತಿದೆಯೆಂದರು.

ಬೆಂಗಳೂರಿನ ಗ್ಲೋಬಲ್ ತಾಂತ್ರಿಕ ತಜ್ಞ ಕೃಷ್ಣಮೂರ್ತಿ ಸುಬ್ಬರಾವ್ ಮಾತನಾಡಿ, ಮೌಲ್ಯಗಳಿಗೆ ನಾವು ಆದ್ಯತೆ ನೀಡಿದರೆ ಯಶಸ್ಸು ಕಾಣಲು ಸಾಧ್ಯವೆಂದರು.

ಮಲೆನಾಡ ತಾಂತ್ರಿಕ ಶಿಕ್ಷಣ ಸಂಸ್ಥೆ ಖಜಾಂಚಿ ಹೆಚ್.ಡಿ.ಪಾರ್ಶನಾಥ್, ಹಿಪ್ಪೋ ಕ್ಯಾಂಪಸ್ ಶಾಲಾ ಉಪಾಧ್ಯಕ್ಷ ಬಿ.ಆರ್.ರಾಜಶೇಖರ್, ನಿರ್ದೇಶಕ ಶಾಂತಿಗ್ರಾಮ ಶಂಕರ್, ಶಾಲೆಯ ಮುಖ್ಯಸ್ಥ ಮಹೇಂದ್ರ, ಶಾಲಾ ಕಾರ್ಯನಿರ್ವಹಣಾಧಿಕಾರಿ ಉಮೇಶ್ ಮಲ್ಹೋತ್ರ, ಲಲಿತಾ ರೆಡ್ಡಿ, ಹೇಮಾಲತಾ ಮತ್ತಿತರರಿದ್ದರು.

# ಧಾರ್ಮಿಕ ಕೇಂದ್ರಗಳು ಮಾನವೀಯತೆ ಪ್ರತಿಪಾದಿಸುವ ತಾಣ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಅರಸೀಕೆರೆ: ಮಸೀದಿ, ಮಂದಿರ, ಚರ್ಚ್‌ಗಳು ಕೇವಲ ಧಾರ್ಮಿಕ ಕಟ್ಟಡಗಳಲ್ಲ. ಮಾನವೀಯತೆ, ಸಹಬಾಳ್ವೆ ಹಾಗು ಶಾಂತಿಯನ್ನು ಬೆಳೆಸುವ ಪವಿತ್ರ ಕೇಂದ್ರಗಳು ಎಂದು ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹಾರನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಮಜ್ಜಿದ್ ಅಕ್ಸಾ ಮಸೀದಿ ಉದ್ಘಾಟಿಸಿ ಮಾತನಾಡಿ, ಧರ್ಮಗಳು ವಿಭಿನ್ನವಾಗಿದ್ದರೂ ನಮ್ಮ ಗುರಿ ಒಂದೇ ಮಾನವ ಕಲ್ಯಾಣವೇ ಆಗಿದೆ.

ಹಾರನಹಳ್ಳಿಯಲ್ಲಿ ಮಜ್ಜಿದ್ ಅಕ್ಸಾ ಉದ್ಘಾಟನೆ ಭಾವೈಕ್ಯತೆಗೆ ಸಂದೇಶ ನೀಡಿದೆ. ಪರಸ್ಪರ ಗೌರವದಿಂದ ಬದುಕಿದರೆ ಸಮಾಜ ಇನ್ನಷ್ಟು ಬಲಿಷ್ಟವಾಗುತ್ತದೆ ಎಂದರು.

ಮಾಜಿ ಸಚಿವ ಸಿ.ಎಂ.ಇಬ್ರಾಹಿಂ ಮಾತನಾಡಿ, ಭಾರತದ ಶಕ್ತಿಯಲ್ಲಿ ವೈವಿಧ್ಯತೆಯಿದೆ. ಧರ್ಮ, ಜಾತಿ, ಭಾಷೆಗಳು ವಿಭಿನ್ನವಾಗಿದ್ದರೂ ಸಂವಿಧಾನ ಎಲ್ಲರನ್ನೂ ಸಮಾನವಾಗಿ ಕಾಣುತ್ತದೆ. ಮಸೀದಿ ಉದ್ಘಾಟನೆಗೆ ವಿವಿಧ ಧರ್ಮದ ನಾಯಕರು ಒಂದೇ ವೇದಿಕೆಯಲ್ಲಿ ಭಾಗವಹಿಸಿರುವುದು ನಿಜವಾದ ರಾಷ್ಟ್ರೀಯ ಏಕತೆಗೆ ಸಾಕ್ಷಿಯಾಗಿದೆ. ಭಾವೈಕ್ಯತೆಯೇ ದೇಶದ ಭದ್ರತೆ ಮತ್ತು ಪ್ರಗತಿಯ ಮೂಲವೆ ಎಂದರು.

ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಗ್ರಾಮೀಣ ಭಾರತದಲ್ಲಿ ಸಹೋದರತ್ವ ಮತ್ತು ಸೌಹಾರ್ದತೆ ಇನ್ನೂ ಜೀವಂತವಾಗಿದೆ.

ಹಾರನಹಳ್ಳಿಯಲ್ಲಿ ಎಲ್ಲಾ ಧರ್ಮದ ಜನರು ಮಸೀದಿ ದರ್ಶನಕ್ಕೆ ಆಗಮಿಸಿರುವುದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯ. ಧರ್ಮವು ಮನುಷ್ಯರನ್ನು ವಿಭಜಿಸುವುದಕ್ಕಲ್ಲ, ಒಗ್ಗೂಡಿಸುವುದಕ್ಕಿದೆ ಎಂಬುದನ್ನು ಇಂತಹ ಕಾರ್ಯಕ್ರಮಗಳು ಸಾರುತ್ತವೆ ಎಂದರು.

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ಯುವಕರು ಮತ್ತು ವಿದ್ಯಾರ್ಥಿಗಳು ಇಂತಹ ಭಾವೈಕ್ಯತಾ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಅಗತ್ಯ. ಧರ್ಮದ ಹೆಸರಿನಲ್ಲಿ ದ್ವೇಷ ಬೀಜ ಬಿತ್ತುವ ಪ್ರಯತ್ನಗಳಿಗೆ ನಾವು ಒಗ್ಗಟ್ಟಿನಿಂದ ಉತ್ತರ ನೀಡಬೇಕು. ಮಜ್ಜಿದ್ ಅಕ್ಸಾ ಉದ್ಘಾಟನೆ ಶಾಂತಿ, ಸಹಬಾಳ್ವೆ ಮತ್ತು ಸಂವಿಧಾನಾತ್ಮಕ ಮೌಲ್ಯಗಳ ಪ್ರತೀಕವಾಗಿದೆ ಎಂದು ಹೇಳಿದರು. ಅರಸೀಕೆರೆ ನಗರಸಭೆ ಮಾಜಿ ಅಧ್ಯಕ್ಷ ಸಮೀವುಲ್ಲಾ ಅವರು ಮಾತನಾಡಿ, ಮಸೀದಿ ಕೇವಲ ನಮಾಜಿನ ಸ್ಥಳವಲ್ಲ. ಅದು ಸಮಾಜ ಸೇವೆ, ಸಹಾನುಭೂತಿ ಮತ್ತು ಸೌಹಾರ್ದತೆಯ ಕೇಂದ್ರವಾಗಬೇಕು. ಎಲ್ಲಾ ಧರ್ಮದವರು ಮಸೀದಿ ದರ್ಶನ ಮಾಡಿರುವುದು ಪರಸ್ಪರ ನಂಬಿಕೆಯನ್ನು ಮತ್ತಷ್ಟು ಬಲಪಡಿಸಿದೆ.

ಇಂತಹ ಭಾವೈಕ್ಯತೆ ಅರಸೀಕೆರೆಯ ಹೆಮ್ಮೆ ಎಂದರು. ಗ್ರಾಮದ ಹಿರಿಯ ಕರೀಂ ಸಾಬ್ ಅವರು ಮಾತನಾಡಿ, ಮಸೀದಿ ಸದಾ ಶಾಂತಿ, ಪ್ರೀತಿ ಮತ್ತು ಮಾನವೀಯತೆಯ ಸಂದೇಶವನ್ನು ಸಾರಲಿದೆ. ಎಲ್ಲರ ಸಹಕಾರದಿಂದ ಈ ಭಾವೈಕ್ಯತೆಯನ್ನು ಮುಂದುವರಿಸುತ್ತೇವೆ ಎಂದರು.

ಮಸೀದಿ ಅಧ್ಯಕ್ಷ ಮೊಹಮ್ಮದ್ ಅತಾವುಲ್ಲಾ, ಕಾರ್ಯದರ್ಶಿ ಮುಬಾರಕ್ ಪಾಷ, ಜಂಟಿ ಕಾರ್ಯದರ್ಶಿ ನವಾಸ್, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಿವಮೂರ್ತಿ, ಮಾಜಿ ಸದಸ್ಯ ಧರ್ಮಶೇಖರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿಳಿಚೌಡಯ್ಯ, ಅಬ್ದುಲ್ ಹಾದಿ, ಖಿಡಾಕಡಿ ಪೀರ್ ಸಾಬ್, ಅಬ್ದುಲ್ ಸಮದ್, ಜಮಾಲುದ್ದೀನ್ ಹಾಗೂ ಇತರರಿದ್ದರು.

# ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಸಾವು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಜಿಲ್ಲೆಯ ಹಿರೀಸಾವೆ ಹಾಗೂ ಅರಸೀಕೆರೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟು ಒಬ್ಬರು ಗಾಯಗೊಂಡಿದ್ದಾರೆ.

ಚನ್ನರಾಯಪಟ್ಟಣ ತಾಲ್ಲೂಕಿನ ಹಿರೀಸಾವೆಯ ನ್ಯೂರಾಕ್ ಹೋಟೆಲ್ ಮುಂಭಾಗ ಹಾಸನ ಕಡೆಯಿಂದ ಬೆಂಗಳೂರು ಕಡೆಗೆ ಹೋಗುತ್ತಿದ್ದ ಅಪರಿಚಿತ ಕಾರು ಡಿಕ್ಕಿಯಾಗಿ ವೃದ್ಧ ಮೃತಪಟ್ಟಿದ್ದಾರೆ. ಬೆಂಗಳೂರಿನ ಬೆಳಂದೂರು ನಿವಾಸಿ ಎಸ್.ಶಿವಲಿಂಗಯ್ಯ (82) ಮೃತರು. ಭದ್ರಾವತಿಯ ಪೇಪರ್ ಮಿಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಅವರು ನಿವೃತ್ತಿ ಬಳಿಕ ಯಡಿಯೂರಿನಲ್ಲಿ ವಾಸವಿದ್ದರು. ಈ ನಡುವೆ ನೆನಪಿನ ಶಕ್ತಿ ಕಡಿಮೆಯಾಗಿ ಯಾವುದಾದರು ಊರಿಗೆ ಹೋದರೆ ವಾಪಾಸ್ ಬರುತ್ತಿರಲಿಲ್ಲ. ಜ. 3 ರಂದು ರಸ್ತೆ ದಾಟುತ್ತಿದ್ದಾಗ ಅವಘಡ ಸಂಭವಿಸಿದೆ. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಎಲೆಕ್ಟ್ರಿಕ್ ಸ್ಕೂಟಿ ನಿಯಂತ್ರಣ ತಪ್ಪಿ ಚರಂಡಿಗೆ ಬಿದ್ದು ಬಾಲಕ ಮೃತಪಟ್ಟು ಮತ್ತೊಬ್ಬ ಗಾಯಗೊಂಡಿರುವ ಘಟನೆ ಅರಸೀಕೆರೆ ತಾಲ್ಲೂಕಿನ ಅಂಚೆಕೊಪ್ಪಲಿನ ಕೆರೆಕೋಡಿ ಸಮೀಪ ನಡೆದಿದೆ. ನಗರದ ಲಕ್ಷ್ಮಿಪುರ ಬಡಾವಣೆಯ ಶಿಕ್ಷಕ ಬಿ.ಬಿ. ಪ್ರಕಾಶ್ ಅವರ ಪುತ್ರ ಹರ್ಷಿತ್ (14) ಮೃತ ಬಾಲಕ. ಸ್ನೇಹಿತ ಶಾಮ್ ಜೊತೆಗೆ ಹರ್ಷಿತ್ ಸ್ಕೂಟರ್‌ನಲ್ಲಿ ಸುತ್ತಾಡಿಕೊಂಡು ಬರಲು ತೆರಳಿದ್ದರು. ಶನಿವಾರ ಸಂಜೆ 7.45ರ ಸಮಯದಲ್ಲಿ ಅಂಚೆಕೊಪ್ಪಲಿನ ಕೆರೆಕೋಡಿಯಿಂದ ಮುಂದೆ ಸರ್ಕಾರಿ ಶಾಲೆಯ ಹತ್ತಿರ ಸ್ವಲ್ಪ ದೂರದಲ್ಲಿ ಸ್ಕೂಟಿಯು ನಿಯಂತ್ರಣಕ್ಕೆ ಸಿಗದೆ ರಸ್ತೆಯ ಪಕ್ಕದಲ್ಲಿದ್ದ ಚರಂಡಿಗೆ ಬಿದ್ದು ಅಪಘಾತವಾಗಿದೆ. ಹರ್ಷಿತ್ ಸ್ಥಳದಲ್ಲೇ ಮೃತಪಟ್ಟಿದ್ದರೆ ಶಾಮ್‌ಗೆ ಗಂಭೀರ ಗಾಯವಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಜನವರಿ-06

**1540:** ಇಂಗ್ಲೆಂಡ್ ರಾಜ ಹೆನ್ರಿ ಅವರು ಆನ್ ಆಫ್ ಕ್ಲೀವ್ಸ್ ಅವರನ್ನು ವಿವಾಹವಾದರು.

**1941:** ಅಮೆರಿಕ ಅಧ್ಯಕ್ಷ ಫ್ರಾಂಕ್ಲಿನ್ ಡಿ. ರೂಸವೆಲ್ಟ್ ಐತಿಹಾಸಿಕ **Four Freedoms** ಭಾಷಣವನ್ನು ಕಾಂಗ್ರೆಸ್‌ನಲ್ಲಿ ನೀಡಿದರು.

**1950:** ಬ್ರಿಟನ್ ದೇಶವು ಚೀನಾ ಜನಗಣರಾಜ್ಯವನ್ನು ಅಧಿಕೃತವಾಗಿ ಮಾನ್ಯತೆ ನೀಡಿತು.

**1994:** ಅಮೆರಿಕದ ಫಿಗರ್ ಸ್ಕೇಟರ್ ನ್ಯಾನ್ಸಿ ಕೆರಿಗನ್ ಮೇಲೆ ನಡೆದ ದಾಳಿ ಕ್ರೀಡಾ ಲೋಕದಲ್ಲಿ ಭಾರೀ ಚರ್ಚೆಗೆ ಕಾರಣವಾಯಿತು.

### ಜನನ

**1412:** ಜೋನ್ ಆಫ್ ಆರ್ಕ್, ಫ್ರಾನ್ಸ್‌ನ ರಾಷ್ಟ್ರನಾಯಕಿ

**1883:** ಖಲಿಲ್ ಜಿಬ್ರಾನ್, ಲೆಬನೀಸ್‌ಅಮೆರಿಕನ್ ತತ್ವಜ್ಞಾನಿ

### ಮರಣ

**1919:** ಥಿಯೋಡರ್ ರೂಸವೆಲ್ಟ್, ಅಮೆರಿಕದ 26ನೇ ಅಧ್ಯಕ್ಷ

**1943:** ಜಾರ್ಜ್ ವಾಷಿಂಗ್ಟನ್ ಕಾವರ್, ಅಮೆರಿಕದ ವಿಜ್ಞಾನಿ, ಕೃಷಿ ಸಂಶೋಧಕ

# ಅಂಗವಿಕಲರಿಗೆ ಸರ್ಕಾರದ ಸೌಲಭ್ಯ ತಲುಪಲಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಅಂಗವಿಕಲ ಫಲಾನುಭವಿಗಳಿಗೆ ಸರ್ಕಾರದ ಸವಲತ್ತು ತಲುಪುವಲ್ಲಿ ವಿಳಂಬವಾಗುತ್ತಿದ್ದು, ಅಧಿಕಾರಿಗಳು ಗಮನ ಹರಿಸಬೇಕೆಂದು ವೇಲಾಪುರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಹೆಚ್.ಎಂ.ದಯಾನಂದ್ ಹೇಳಿದರು.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್, ವೇಲಾಪುರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವೇದಿಕೆ, ದಿವ್ಯಾಂಗ ಚೇತನರ ಗೆಳೆಯರ ಬಳಗ ಹಾಗು ಎಂಆರ್‌ಡಬ್ಲ್ಯು, ಯುಆರ್‌ಡಬ್ಲ್ಯು, ವಿಆರ್‌ಡಬ್ಲ್ಯು ವತಿಯಿಂದ ಪಟ್ಟಣದ ಸರ್ಕಾರಿ ಬಾಲಕರ ಸರ್ಕಾರಿ ಮಾಧ್ಯಮಿಕ ಶಾಲಾ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮ ದಿನಾಚರಣೆ ಹಾಗೂ ವಿಶ್ವ ಅಂಗವಿಕಲರ ದಿನಾಚರಣೆಯಲ್ಲಿ ಮಾತನಾಡಿ, ಸರ್ಕಾರದಿಂದ ಅಂಗವಿಕಲರಿಗೆ ಮೀಸಲಾದ ಅನುದಾನ, ಸೌಲಭ್ಯ ಜಿಲ್ಲಾ, ತಾಲ್ಲೂಕು ಪಂಚಾಯಿತಿ, ಪುರಸಭೆಯಲ್ಲಿ ಅಂಗವಿಕಲರಿಗೆ ನಿಗದಿಪಡಿಸಿರುವ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಬಾರದು. ಪ್ರತಿ ತಿಂಗಳು ತಪ್ಪದೇ ಅಂಗವಿಕಲರಿಗೆ ಮಾಸಾಶನ ಸಿಗುವಂತಾಗಬೇಕು. ಈ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಜೊತೆಗೆ ಪುರಸಭೆಯಿಂದ ಅಂಗವಿಕಲರ ಸಂಘಕ್ಕೆ ನಿವೇಶನ ಕೊಟ್ಟರೆ ಇಂತಹ ಕಾರ್ಯಕ್ರಮಗಳು ಮತ್ತು ತಮ್ಮ ಸಮಸ್ಯೆಗಳ ನಿವಾರಣೆಗೆ ಅನುಕೂಲವಾಗುತ್ತದೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಗೌರವ ಕಾರ್ಯದರ್ಶಿ ಬಿ.ಬಿ.ಶಿವರಾಜ್ ಮಾತನಾಡಿ, ಅಂಗವಿಕಲರಿಗೆ ಅನುಕಂಪಕ್ಕಿಂತ ಅವಕಾಶ ನೀಡಿ ಧೈರ್ಯ ತುಂಬಬೇಕು. ಅಂಗವಿಕಲರು ಯಾರಿಗೂ ಕಮ್ಮಿ ಇಲ್ಲದಂತೆ ಸಾಧನೆ ಮಾಡುತ್ತಿರುವುದು ಮೆಚ್ಚುಗೆಯ ವಿಷಯ ಎಂದರು.

ಜಿಲ್ಲಾ ಅಂಗವಿಕಲರ ಅಧಿಕಾರಿ ಕೆ.ಆರ್.ಅನುಪಮ ಮಾತನಾಡಿ, ಅಂಗವಿಕಲರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ನಮ್ಮ ಸಿಬ್ಬಂದಿ ಪ್ರತಿಯೊಂದು ಮನೆಗೂ ಭೇಟಿ ನೀಡಿ ಫಲಾನುಭವಿಗಳನ್ನು ಗುರುತಿಸಿ ಸೌಲಭ್ಯ ಸಿಗುವಂತೆ ಎಚ್ಚರಿಕೆ ವಹಿಸಲಾಗಿದೆ. ಅಂಗವಿಕಲರ ಅಭಿವೃದ್ಧಿ ಹಾಗು ಅವಶ್ಯಕತೆಗಾಗಿ ಜಿಲ್ಲೆ, ತಾಲ್ಲೂಕು ಮತ್ತು ಪ್ರತಿ ಗ್ರಾಮ ಪಂಚಾಯಿತಿಗಳಲ್ಲೂ ಸಿಬ್ಬಂದಿ ಕೆಲಸ ಮಾಡುತ್ತಾರೆ. ಅವರಿಗೆ ಅಂಗವಿಕರು ತಮ್ಮ ಅರ್ಜಿ ಕೊಟ್ಟರೆ ಕೆಲಸಗಳನ್ನು ಮಾಡಿ ಕೊಡಲಿದ್ದಾರೆಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್, ಕಸಾಪ ತಾಲ್ಲೂಕು ಅಧ್ಯಕ್ಷ ಮಂಜೇಗೌಡ, ಶಿಕ್ಷಕ ತಿಮ್ಮೇಶ್, ದಿವ್ಯಾಂಗ ಚೇತನರ ಗೆಳೆಯರ ಬಳಗದ ಅಧ್ಯಕ್ಷ ಪುರುಷೋತ್ತಮ್, ಕಾರ್ಯದರ್ಶಿ ಗಿರೀಶ್, ತಾಹೀರಾ, ಮ.ಶಿವಮೂರ್ತಿ, ಸಾಹಿತಿ ಮಧುಮಾಲತಿ, ರವೀಂದ್ರ, ರಾಜಶೇಖರಪ್ಪ, ಕುಮಾರಸ್ವಾಮಿ ಇತರರಿದ್ದರು.

# ರಾಷ್ಟ್ರೀಯ ಪಕ್ಷಿಗಳ ದಿನ-ಭೂಮಿಯ ಜೀವ ಸಂಪತ್ತಿನ ಅಮೂಲ್ಯ ರಕ್ಷಕರು!



**- ಅಂತೋಣಿ ಮುತ್ತು ವಿ, ಶಿಕ್ಷಕರು (9449376695)**

ರಾಷ್ಟ್ರೀಯ ಪಕ್ಷಿಗಳ ದಿನವನ್ನು ಪ್ರತಿವರ್ಷ ಜನವರಿ 5ರಂದು ಆಚರಿಸಲಾಗುತ್ತದೆ. ಈ ದಿನವನ್ನು ಭಾರತದ ಪಕ್ಷಿ ಶಾಸ್ತ್ರದ ಪಿತಾಮಹ ಎಂದು ಪ್ರಸಿದ್ಧರಾದ ಡಾ. ಸಲೀಂ ಅಲಿ ಅವರ ಜನ್ಮದಿನದ ನೆನಪಿಗಾಗಿ ಆಚರಿಸಲಾಗುತ್ತದೆ.

ಪಕ್ಷಿ ಸಂಶೋಧನೆ ಮತ್ತು ಸಂರಕ್ಷಣೆಗೆ ಅಪಾರ ಕೊಡುಗೆ ನೀಡಿದ ಡಾ. ಸಲೀಂ ಅಲಿ ಅವರ ಆದರ್ಶಗಳನ್ನು ಸ್ಮರಿಸುವುದು ಈ ದಿನದ ಮುಖ್ಯ ಉದ್ದೇಶವಾಗಿದೆ. ಭೂಮಿಯ ಮೇಲಿನ ಜೀವಜಾಲದ ಸಮತೋಲನವನ್ನು ಕಾಪಾಡುವಲ್ಲಿ ಪಕ್ಷಿಗಳು ಅತ್ಯಂತ ಪ್ರಮುಖ ಪಾತ್ರ ವಹಿಸುತ್ತವೆ.

ಪಕ್ಷಿಗಳಿಲ್ಲದೆ ಪ್ರಕೃತಿಯ ಸಹಜ ಚಕ್ರ ಅಸ್ತವ್ಯಸ್ತವಾಗುತ್ತದೆ. ಕೀಟಗಳನ್ನು ನಿಯಂತ್ರಿಸುವ ಮೂಲಕ ಕೃಷಿಗೆ ಸಹಾಯ ಮಾಡುವುದು, ಬೀಜಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹರಡುವುದು, ಹೂವಿನ ಪರಾಗಸ್ಪರ್ಶಕ್ಕೆ ನೆರವಾಗುವುದು ಪಕ್ಷಿಗಳ ಮುಖ್ಯ ಕರ್ತವ್ಯಗಳಾಗಿವೆ. ಇದರಿಂದ ಆಹಾರ ಉತ್ಪಾದನೆ ಹೆಚ್ಚಾಗಿ ಮಾನವ ಜೀವನ ಸುಗಮವಾಗುತ್ತದೆ. ಪಕ್ಷಿಗಳು ಪರಿಸರದ ಆರೋಗ್ಯದ ಸೂಚಕಗಳಾಗಿದ್ದು, ಅವುಗಳ ಸಂಖ್ಯೆ ಕಡಿಮೆಯಾಗುವುದು ಪರಿಸರ ಅಸಮತೋಲನದ ಎಚ್ಚರಿಕೆಯಾಗಿದೆ. ಮಾನವನಿಗೆ ಪಕ್ಷಿಗಳಿಂದ ನೇರ ಮತ್ತು ಪರೋಕ್ಷ ಅನೇಕ ಲಾಭಗಳಿವೆ.

ಪಕ್ಷಿಗಳ ಕಿಲಿಕಿಲಿ ಧ್ವನಿ ಮನಸ್ಸಿಗೆ ಶಾಂತಿ ನೀಡುತ್ತದೆ, ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುತ್ತದೆ. ಆದರೆ ಇಂದಿನ ಕಾಲದಲ್ಲಿ ಅರಣ್ಯ ನಾಶ, ಅತಿಯಾದ ನಗರೀಕರಣ, ವಾಯು ಹಾಗೂ ಧ್ವನಿ ಮಾಲಿನ್ಯ, ರಾಸಾಯನಿಕಗಳ ಅತಿಯಾದ ಬಳಕೆಗಳಿಂದ ಪಕ್ಷಿಗಳ ಸಂಖ್ಯೆ ದಿನೇ ದಿನೇ ಕುಸಿಯುತ್ತಿದೆ.

ಇದರಿಂದ ಪರಿಸರವೂ ಮಾನವ ಜೀವನವೂ ಅಪಾಯಕ್ಕೆ ಒಳಗಾಗುತ್ತಿದೆ. ರಾಷ್ಟ್ರೀಯ ಪಕ್ಷಿಗಳ ದಿನವನ್ನು ಆಚರಿಸುವುದರಿಂದ ಪಕ್ಷಿ ಸಂರಕ್ಷಣೆಯ ಮಹತ್ವವನ್ನು ಜನರಲ್ಲಿ ಅರಿವು ಮೂಡಿಸಿ, ಮರಗಳನ್ನು ನೆಡುವುದು, ನೀರಿನ ಪಾತ್ರೆಗಳನ್ನು ಇಡುವುದು, ಪಕ್ಷಿಗಳಿಗೆ ಗೂಡುಗಳ ನಿರ್ಮಾಣಕ್ಕೆ ಸಹಾಯ ಮಾಡುವಂತಹ ಸಣ್ಣ ಕಾರ್ಯಗಳ ಮೂಲಕವೂ ನಾವು ದೊಡ್ಡ ಬದಲಾವಣೆ ತರಬಹುದು ಎಂಬ ಸಂದೇಶ ನೀಡುತ್ತದೆ. ಪಕ್ಷಿಗಳನ್ನು ಉಳಿಸುವುದು ನಮ್ಮ ಕರ್ತವ್ಯ ಮಾತ್ರವಲ್ಲ, ಭವಿಷ್ಯದ ಭದ್ರತೆಯೂ ಹೌದು. ಪಕ್ಷಿಗಳೊಂದಿಗೆ ಸಹಜವಾಗಿ ಬದುಕಿದಾಗ ಮಾತ್ರ ಭೂಮಿಯ ಮೇಲೆ ಜೀವನ ಸದಾ ಹಸನಾಗಿರುತ್ತದೆ.

# ಆಟೋ ಚಾಲಕನಿಗೆ ಚಾಕುವಿನಿಂದ ಇರಿತ

ಹಾಸನ: ಕಾರಿಗೆ ಆಟೋ ಅಡ್ಡ ಬಂದಿತು ಎಂಬ ಸಣ್ಣ ಕಾರಣಕ್ಕೆ ಐವರು ಅಪರಿಚಿತರು ಆಟೋ ಚಾಲಕನಿಗೆ ಮನಬಂದಂಥೆ ಥಳಿಸಿ ಚಾಕುವಿನಿಂದ ಬೆನ್ನಿನ ಭಾಗಕ್ಕೆ ಇರಿದಿರುವ ಘಟನೆ ನಗರ ಹೊರವಲಯದ ಬೆಂಗಳೂರು-ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ರಜತ್ ಡಾಬಾ ಬಳಿ ಇತ್ತೀಚೆಗೆ ನಡೆದಿದೆ.

ಶಾಂತಿಗ್ರಾಮ ಹೋಬಳಿ ಸಮುದ್ರವಳ್ಳಿ ಗ್ರಾಮದ ಪ್ರಸನ್ನ ಗಾಯಾಳು. ಜ.2ರ ಸಂಜೆ 7 ಗಂಟೆ ಸಮಯದಲ್ಲಿ ಮನೆಗೆ ಹೋಗುತ್ತಿದ್ದಾಗ ರಸ್ತೆ ಪಕ್ಕದ ಡೈರಿಯಲ್ಲಿ ಹಾಲು, ಮೊಸರು ಖರೀದಿಸಿ ಆಟೋವನ್ನು ರಸ್ತೆಯ ಕಡೆ ತಿರುಗಿಸಿದಾಗ ಹಾಸನ ಕಡೆಯಿಂದ ವೇಗವಾಗಿ ಬಂದ (ಕೆಎ11ಎನ್9783) ಕಾರು ಚಾಲಕ ವಾಹನ ನಿಲ್ಲಿಸಿ ರಸ್ತೆಗೆ ಅಡ್ಡ ಬರುತ್ತೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ಇಬ್ಬರ ನಡುವೆ ಮಾತಿಗೆ ಮಾತು ಬೆಳೆದು ಕಾರಿನಲ್ಲಿದ್ದ ಇತರ ನಾಲ್ವರು ಕೆಳಗಿಳಿದಿ ಮನಸೋಯಿಚ್ಛೆ ಥಳಿಸಿದ್ದಾರೆ. ಅದರಲ್ಲಿ ಒಬ್ಬ ಚಾಕುವಿನಿಂದ ಬೆನ್ನಿನ ಭಾಗಕ್ಕೆ ಇರಿದಿದ್ದಾನೆ. ಗಲಾಟೆಯ ವಿಚಾರ ತಿಳಿದು ಸ್ಥಳೀಯರು ದೌಡಾಯಿಸಿ ಜಗಳ ಬಿಡಿಸಿ ಪ್ರಸನ್ನ ಅವರನ್ನು ಹಿಮ್ಸ್‌ಗೆ ದಾಖಲಿಸಿದ್ದಾರೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# 14 ವರ್ಷದ ಬಳಿಕ ಕಳವು ಅಪರಾಧಿಗಳಿಗೆ ಶಿಕ್ಷೆ

ಅರಕಲಗೂಡು: ಹದಿನಾಲ್ಕು ವರ್ಷಗಳ ಹಿಂದೆ ನಡೆದಿದ್ದ ದರೋಡೆ ಪ್ರಕರಣದ ಆರೋಪಿಗಳಿಗೆ ಇಲ್ಲಿನ 1ನೇ ಹೆಚ್ಚುವರಿ ನ್ಯಾಯಾಲಯ ಕಠಿಣ ಸಜೆ ಮತ್ತು ದಂಡ ವಿಧಿಸಿದೆ.

ಮಂಡ್ಯದ ತಿಮ್ಮಯ್ಯ, ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಅಕ್ಕೂರು ಗ್ರಾಮದ ರಾಮಯ್ಯ, ದೊಡ್ಡಮಗ್ಗೆ ಹೋಬಳಿ ಇಬ್ಬಡಿ ಗ್ರಾಮದ ಪುಟ್ಟರಾಜ ಹಾಗು ಸತೀಶ ಅಪರಾಧಿಗಳು. 2012ರ ಮೇ ತಿಂಗಳಿನಲ್ಲಿ ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯ ಕೊರಟಿಕೆರೆ ಗ್ರಾಮದ ಒಂಟಿ ಮನೆಯ ಬಾಗಿಲು ಒಡೆದು ಮನೆಯಲ್ಲಿದ್ದ ಮಹಿಳೆ ಮತ್ತು ಮಕ್ಕಳ ಮೇಲೆ ಹಲ್ಲೆ ನಡೆಸಿ ಚಿನ್ನದ ಒಡವೆ, ಹಣ ಬಟ್ಟೆ, ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದರು.

ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ 1ನೇ ಹೆಚ್ಚುವರಿ ನ್ಯಾಯಾಲಯದ ನ್ಯಾಯಾಧೀಶ ಎಂ.ರಘು ಅವರು, ಪುಟ್ಟರಾಜು ಮತ್ತು ಸತೀಶ್‌ಗೆ 5 ವರ್ಷ 6 ತಿಂಗಳು ಕಾರಾಗೃಹವಾಸ ಮತ್ತು 13 ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ. ತಿಮ್ಮಯ್ಯ ಎಂಬಾತ ಮೃತಪಟ್ಟಿದ್ದು ಇನ್ನೊಬ್ಬ ಆರೋಪಿ ರಾಮಯ್ಯ ಕಾರಾಗೃಹದಲ್ಲಿದ್ದಾನೆ. ಉಳಿದ ಅಪರಾಧಿಗಳಿಗೆ ಶಿಕ್ಷೆ ಪ್ರಕಟಿಸಲಾಗಿದೆ. ಸರ್ಕಾರದ ಪರವಾಗಿ ಬಿ.ಬಿ.ಶಿವಪ್ಪ ವಾದ ಮಂಡಿಸಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248